ಮೀಟಿಂಗ್ ಮಾಡಿ ಅದನ್ನು ಸರಿ ಮಾಡಲು ಹೇಳಿದ್ದೇನೆ. ನನಗೆ ಬಂದ ಉತ್ತರ ಸರಿಯಿರಲಿಲ್ಲ. ನಾಳೆ ಉತ್ತರವನ್ನು ಕೊಡುತ್ತೇನೆ.

ಉಪಾಧ್ಯಕ್ಷರು: ನಾಳೆ ಉತ್ತರವನ್ನು ಕೊಡುತ್ತಾರೆ ಬಿಡಿ. ಡಾ॥ ಕೆ. ಸುಧಾಕರ್‌ರವರು ಹಾಜರಿಲ್ಲ. ಮಾನ್ಯ ಶ್ರೀ ಕೆ.ಗೋಪಾಲ ಪೂಜಾರಿಯವರು ಹಾಜರಿಲ್ಲ. ಶ್ರೀ ಬಿ.ಆರ್.ಪಾಟೀಲ್‌ರವರು ಮಾತನಾಡುವುದು.

5. ವಿಷಯ: ಆಳಂದ ಪಟ್ಟಣದಲ್ಲಿ ರಾಜೀವ್‌ಗಾಂಧಿ ವಸತಿ ಗೃಹ ನಿರ್ಮಾಣ ನಿಗಮದಲ್ಲಿ ಮನೆ ಹಂಚಿಕೆ ಮಾಡಿರುವ ಬಗ್ಗೆ ತನಿಖೆ ನಡೆಸಲು ರಚಿಸಲಾಗಿದ್ದ ತಂಡ ಇದುವರೆಗೂ ವರದಿ ನೀಡದಿರುವ ಬಗ್ಗೆ.

****

ಶ್ರೀ ಬಿ.ಆರ್. ಪಾಟೀಲ್ (ಆಳಂದ): ಮಾನ್ಯ ಉಪಾಧ್ಯಕ್ಷರೆ ಶಾಸಕನಾದ ಮೇಲೆ ಈ ವಿಷಯವನ್ನು ನಾನು ಪದೇ ಪದೇ ಈ ವಿಚಾರ ಮಾಡುತ್ತಿದ್ದೇನೆ.

ಉಪಾಧ್ಯಕ್ಷರು: ಗಮನ ಸೆಳೆದು ಬಿಡಿ ಸಾಕು.

ಶ್ರೀ ಬಿ.ಆರ್. ಪಾಟೀಲ್: ಪದೇ ಪದೇ ಇವರು ತಪ್ಪು ಮಾಹಿತಿಯನ್ನು ಕೊಟ್ಟು ಸುಳ್ಳು ಹೇಳಿ ಜಾರಿಕೊಳ್ಳುತ್ತಿದ್ದಾರೆ. ವಸತಿ ಇಲಾಖೆ ಫಲಾನುಭವಿಗಳ ಆಯ್ಕೆ ಪಟ್ಟಿಯನ್ನು ಏನು ಮಾಡುತ್ತಾರೆ, 2012 ರಲ್ಲಿ ತರಾತುರಿಯಲ್ಲಿ ಮಾಡಿದರು. ಅದರ ಬಗ್ಗೆ proceedings ಇಲ್ಲ. ಅದು ಕಾನೂನುಬಾಹಿರ ಮಾಡಿ ಕಳುಹಿಸಿದರು. ನಾನು ನಿಗಮಕ್ಕೆ ಹೋಗಿ ಹೇಳಿದ ಮೇಲೆ ಇದಕ್ಕೆ ಒಪ್ಪಿಗೆ ಕೊಟ್ಟಿಲ್ಲ ಎಂದು ಹೇಳಿದರು. ಪುನಃ ನಾನು ಬಂದು ಪ್ರಕ್ರಿಯೆ ಶುರು ಮಾಡಿದಾಗ, ಅಲ್ಲಿ ಏನೂ ಇಲ್ಲ. ಇವತ್ತು ಅದು ತಕರಾರು ಆದಮೇಲೆ ಮತ್ತೆ ಇವರು ಹೇಳುತ್ತಾರೆ, ಆಯ್ಕೆಯಾದ ಫಲಾನುಭವಿಗಳ ಪೈಕಿ ಕಛೇರಿಯಲ್ಲಿ ಲಭ್ಯವಿದ್ದ ಫಲಾನುಭವಿಗಳ ಸಂಖ್ಯೆ 434. ಆಯ್ಕೆಯಾದ ಒಟ್ಟು ಫಲಾನುಭವಿಗಳ ಸಂಖ್ಯೆ 535. ಇದು ಏನು? ಅಂದರೆ ಅರ್ಜಿಗಳು ಇಲ್ಲದ್ದಕ್ಕಿಂತ ಜಾಸ್ತಿ ಆಯ್ಕೆಯಾದರು. ಆಮೇಲೆ 101 ಫಲಾನುಭವಿಗಳ ಅರ್ಜಿಗಳೇ ಲಭ್ಯವಿಲ್ಲವೆಂದು ಹೇಳುತ್ತಾರೆ. ಇವೆಲ್ಲಾ ಗೋಲ್‌ಮಾಲ್ ನಡೆದಿದೆ.

ಗುಲ್ಬರ್ಗಾ ಜಿಲ್ಲಾಧಿಕಾರಿ, A.C ಸೇಡಂ ಮತ್ತು P.D ತನಿಖಾ ತಂಡವನ್ನು ಮಾಡಿ ಕಳುಹಿಸಿ ಎಂದು ಹೇಳಿ ಒಂದು ವರ್ಷ ಆಯಿತು. ಕಳೆದ ವರ್ಷ ಜುಲೈಯಲ್ಲಿ ನೇಮಕ ಮಾಡಿದ್ದಾರೆ. ಇವತ್ತಿನವರೆಗೂ ಅವರು ಬಂದು ನೋಡಿಲ್ಲ. ತನಿಖೆ ಮಾಡಿಲ್ಲ. ಅಲ್ಲಿ proceedings ಏನೂ ಇಲ್ಲ. Records ಇಲ್ಲ. ಇದನ್ನು ಬೋಗಸ್ ಮಾಡಿ ಕಳುಹಿಸಿದ್ದನ್ನು ತಪ್ಪು ಮಾಡಿರುವುದನ್ನು ಮುಚ್ಚಿಕೊಳ್ಳುವಂತಹ ಪ್ರಯತ್ನ ಮಾಡಿದ್ದಾರೆ. ಸರ್ಕಾರದವರು ಎಚ್ಚರವಾಗಿರಬೇಕು. ನಾನು ಕೋರ್ಟ್‌ಗೆ ಹೋಗಿ ಎಳೆಯುತ್ತೇನೆ. ಯಾರ್ಯಾರು ತಪ್ಪು ಮಾಡಿದ್ದಾರೆ, ಏನೇನು ಮುಚ್ಚಿಡುವಂತಹ ಪ್ರಯತ್ನ ನಡೆದಿದೆ.

ಉಪಾಧ್ಯಕ್ಷರು: ಮಾನ್ಯ ಸಚಿವರು ಉತ್ತರ ಕೊಡಲಿ.

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಬಡವರಿಗೆ ನ್ಯಾಯ ಸಿಗಬೇಕು. ಯಾರೋ ಬೋಗಸ್, ನೌಕರಿ ಇದ್ದವರಿಗೆ ತಾವು ಕೊಟ್ಟಿದ್ದೀರಿ. ಮನೆ ಇದ್ದವರಿಗೆ ತಾವು ಮನೆಗಳನ್ನು ಕೊಟ್ಟಿದ್ದೀರಿ. ಇದು ಕಾನೂನಾ?

ಶ್ರೀ ವಿನಯ್‌ಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು) (ಮಾನ್ಯ ವಸತಿ ಸಚಿವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ, ಕಲ್ಬುರ್ಗಿ ಜಿಲ್ಲಾಧಿಕಾರಿಗಳು ಸಲ್ಲಿಸಿರುವ ವರದಿಯಂತೆ, ಆಳಂದ ಪಟ್ಟಣದಲ್ಲಿ ನಗರ ಆಶ್ರಯ ಯೋಜನೆಯಡಿ ಸರ್ವೆ ನಂ.750ರಲ್ಲಿ 15.00 ಎಕರೆ ಜಮೀನನ್ನು ದಿನಾಂಕ:23.02.2007ರಲ್ಲಿ ಖರೀದಿಸಲಾಗಿದೆ. ಖರೀದಿಸಿದ ಜಮೀನನ್ನು ದಿನಾಂಕ:22.11.2011ರಂದು ಮುಖ್ಯಾಧಿಕಾರಿ ಪುರಸಭೆ ಆಳಂದ ಇವರಿಗೆ ಹಸ್ತಾಂತರವಾಗಿರುತ್ತದೆ. ನಗರ ಯೋಜನಾ ಪ್ರಾಧಿಕಾರ ಕಲಬುರಗಿರವರಿಂದ ರೂಪರೇಷಕ್ಕೆ ಅನುಮೋದನೆ ಪಡೆದು ಒಟ್ಟು 535 ನಿವೇಶನಗಳನ್ನು ರಚಿಸಲಾಗಿರುತ್ತದೆ. ದಿನಾಂಕ:2.11.2012ರಂದು ಮಾನ್ಯ ಹಿಂದಿನ ಶಾಸಕರ ಅಧ್ಯಕ್ಷತೆಯಲ್ಲಿ ನಗರ ಆಶ್ರಯ ಸಮಿತಿಯಲ್ಲಿ ಫಲಾನುಭವಿಗಳನ್ನು ಸಹ ಆಯ್ಕೆ ಮಾಡಿದ್ದು, 535 ಫಲಾನುಭವಿಗಳ ಪೈಕಿ 332 ಮಹಿಳಾ ಫಲಾನುಭವಿಗಳ ಹೆಸರಿಗೆ ಹಕ್ಕು ಪತ್ರಗಳನ್ನು ನಿಗಮದಿಂದ ನೀಡಲಾಗಿರುತ್ತದ.

ಸದರಿ ಫಲಾನುಭವಿಗಳ ಆಯ್ಕೆಗೆ ಸ್ಥಳೀಯ ನೂತನವಾಗಿ ಆಯ್ಕೆಯಾಗಿರುವ ಮಾನ್ಯ ಶಾಸಕರಿಂದ ಆಕ್ಷೇಪಣೆ ಇದ್ದ ಪ್ರಯುಕ್ತ ಜಿಲ್ಲಾ ಮಟ್ಟದ ಪರಿಶೀಲನಾ ತಂಡವನ್ನು ರಚಿಸಿ, ಪರಿಶೀಲನಾ ತಂಡವು ಎಲ್ಲಾ ಫಲಾನುಭವಿಗಳ ಅರ್ಹತೆಯನ್ನು ಪರಿಶೀಲಿಸಿ ವರದಿ ನೀಡಲು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ. ಅದರಂತೆ ಜಿಲ್ಲಾಧಿಕಾರಿಗಳು ದಿನಾಂಕ: 27.12.2013 ರಂದು ಅಪರ ಜಿಲ್ಲಾಧಿಕಾರಿಗಳು ಕಲಬುರಗಿ ಹಾಗೂ ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ ಕಲಬುರ್ಗಿ ಇವರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯ ವರದಿಯನ್ನು ದಿನಾಂಕ:17.2.2014ರಂದು ಸಲ್ಲಿಸಿರುತ್ತಾರೆ. ಸದರಿ ವರದಿ ವಿವರ ಹೀಗಿರುತ್ತದೆ: "ಆಳಂದ ಪುರಸಭೆ ವ್ಯಾಪ್ತಿಯಲ್ಲಿ ಬರುವ ಸರ್ವೆ ನಂ 750ರಲ್ಲಿ 535 ಫಲಾನುಭವಿಗಳನ್ನು ನಗರ ಆಶ್ರಯ ಸಮಿತಿಯಲ್ಲಿ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಿದ್ದು, 535 ಫಲಾನುಭವಿಗಳ ದಾಖಲೆಗಳನ್ನು ಪರಿಶೀಲಿಸಲಾಗಿದ್ದು, ವಿವರ ಈ ಕೆಳಗಿನಂತಿದೆ:–

ಕ್ರ.ಸಂ	ವಿವರ	ಸ್ವೀಕರಿಸಿದ ಅರ್ಜಿಗಳು
1	ಆಯ್ಕೆಯಾದ ಒಟ್ಟು ಫಲಾನುಭವಿಗಳ ಸಂಖ್ಯೆ	535
2	ರಿಜಿಸ್ಟರ ಪ್ರಕಾರ ಬಂದ ಅರ್ಜಿಗಳ ಸಂಖ್ಯೆ	2528
3	ಆಯ್ಕೆಯಾದ ಫಲಾನುಭವಿಗಳ ಪೈಕಿ ಕಛೇರಿಯಲ್ಲಿ ಲಭ್ಯವಿದ್ದ ಅರ್ಜಿಗಳ ಸಂಖ್ಯೆ	434
4	ಆಯ್ಕೆಯಾದ ಫಲಾನುಭವಿಗಳ ಪೈಕಿ ಲಭ್ಯವಿಲ್ಲದ ಅರ್ಜಿಗಳ ಸಂಖ್ಯೆ	101

ನಿಯಮಾನುಸಾರ ಆಶ್ರಯ ಸಮಿತಿಯಲ್ಲಿ 535 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು, ಆಯ್ಕೆಯಾದ ಫಲಾನುಭವಿಗಳ ಪೈಕಿ ಪ್ರಸ್ತುತ 434 ಅರ್ಜಿಗಳು ಮಾತ್ರ ಲಭ್ಯವಿದ್ದು, ಅರ್ಜಿ ಆಹ್ವಾನಿಸಿದ ರಿಜೀಸ್ಟ್ರಿನಲ್ಲಿ 2528 ಫಲಾನುಭವಿಗಳ ಪಟ್ಟಿ ಇರುತ್ತದೆ. ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ನಿಯಮಾನುಸಾರ ಫಲಾನುಭವಿಗಳು ಆಯ್ಕೆಯಾಗಿದ್ದು, ಆಯ್ಕೆ ಪಟ್ಟಿಗೆ

ತಹಸೀಲ್ದಾರರು, ಮತ್ತು ಮುಖ್ಯಾಧಿಕಾರಿಗಳು ಸಹಿ ಮಾಡಿರುವುದಾಗಿ ವರದಿಯಲ್ಲಿ ತಿಳಿಸಲಾಗಿದೆ".

ಮಾನ್ಯ ಶಾಸಕರು ದಿನಾಂಕ: 10.7.2014ರಂದು ನಿಗಮಕ್ಕೆ ಬರೆದ ಪತ್ರದಲ್ಲಿ ಸದರಿ ಸಮಿತಿಯ ವರದಿಯ ಕುರಿತು ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. ಆದ್ದರಿಂದ ನಿಗಮದ ದಿನಾಂಕ: 10.7.2014ರ ಪತ್ರದಲ್ಲಿ ಸೂಚಿಸಿದಂತೆ, ದಿನಾಂಕ: 16.7.2014ರಂದು ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ ಪುನರ್ ರಚಿಸಲಾಗಿರುತ್ತದೆ. ಸದರಿ ಸಮಿತಿಯಲ್ಲಿ, ಉಪಕಾರ್ಯದರ್ಶಿ ಜಿಲ್ಲಾ ಪಂಚಾಯತ್ ಕಲಬುರಗಿ, ಸಹಾಯಕ ಆಯುಕ್ತರು ಸೇಡಂ, ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ ಕಲಬುರಗಿ ಮತ್ತು ತಹಸೀಲ್ದಾರ್ ಆಳಂದ ಇವರನ್ನೊಳಗೊಂಡ ತಂಡವು ದಾಖಲೆಗಳ ಪರಿಶೀಲನಾ ಕಾರ್ಯವನ್ನು ಕೈಗೊಳ್ಳುತ್ತಿದ್ದು, ಸದರಿ ತಂಡವು ಹೆಚ್ಚುವರಿ ದಾಖಲಾತಿಗಳನ್ನು ಪರಿಶೀಲಿಸಲು ಹಾಗೂ ಆ ಸಮಯದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಅಧಿಕಾರಿಯೊಂದಿಗೆ ಚರ್ಚಿಸಿ ನಿರ್ಣಯ ತೆಗೆದುಕೊಳ್ಳಲು ಕಾಲಾವಕಾಶ ಬೇಕಾಗಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ಸದರಿ ಸಮಿತಿಯ ವರದಿ ಬಂದ ನಂತರ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ವಸತಿ ಸಚಿವರ ಪರವಾಗಿ ಉತ್ತರ ಹೇಳುತ್ತಿದ್ದೇನೆ. ಇವತ್ತು ಮಾನ್ಯ ಶಾಸಕರು ಆಯ್ಕೆಯಾಗಿ ಬಂದ ನಂತರ ಇದರ ಬಗ್ಗೆ ಸರಿಯಾಗಿ ನಡೆದಿಲ್ಲ ಎನ್ನುವುದರ ಬಗ್ಗೆ ಗಮನಕ್ಕೆ ತಂದ ನಂತರ ಅದಕ್ಕೆ ಅಪರ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿಯನ್ನು ರಚನೆ ಮಾಡಿ ವರದಿಯನ್ನು ಕೊಡುವಂತಹ ಅವಕಾಶಗಳಾಯಿತು.

ಶ್ರೀ ಬಿ.ಆರ್. ಪಾಟೀಲ್: ಅದೆಲ್ಲಾ ಉತ್ತರದಲ್ಲಿ ಹೇಳಿದ್ದಾರೆ.

ಉಪಾಧ್ಯಕ್ಷರು: ಮಾನ್ಯ ಸದಸ್ಯರು ಸಮಸ್ಯೆ ಬಗೆಹರಿದಿಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ವಿನಯ್‌ಕುಮಾರ್ ಸೊರಕೆ: ನಂತರ ಪುನಃ ಅದರಲ್ಲಿ ಆ ವರದಿಯ ಪ್ರಕಾರ ಮಾನ್ಯ ಶಾಸಕರಿಗೆ ಸರಿಯಾದ ರೀತಿಯ ಮಾಹಿತಿ ಬಂದಿಲ್ಲ

ಎನ್ನುವಂತಹ ಉದ್ದೇಶಕ್ಕೋಸ್ಕರ ಪುನಃ ಒಂದು ಸಮಿತಿಯನ್ನು ಮಾಡಿ ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ, ಉಪಕಾರ್ಯದರ್ಶಿ ಜಿಲ್ಲಾಪಂಚಾಯತ್ ಕಲ್ಬುರ್ಗಿ, ಸಹಾಯಕ ಆಯುಕ್ತರು ಸೇಡಂ, ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ ಕಲ್ಬುರ್ಗಿ, ತಹಶೀಲ್ದಾರರು ಆಳಂದ, ಇವರನ್ನೂ ಸಂಬಂಧಪಟ್ಟಂತೆ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿಕೊಂಡು ಸಂಬಂಧಪಟ್ಟ ಫಲಾನುಭವಿಗಳನ್ನೂ ಕೂಡ ತನಿಖೆ ಮಾಡುವಂಥದ್ದು, ವಿಮರ್ಶೆ ಮಾಡುವಂತಹ ಕೆಲಸಕಾರ್ಯ ಮಾಡಿಕೊಂಡು ಆದಷ್ಟು ಶೀಘ್ರವಾಗಿ ವರದಿಯನ್ನು ತರಿಸುತ್ತೇವೆ.

ಶ್ರೀ ಬಿ.ಆರ್. ಪಾಟೀಲ್: ಈಗಾಗಲೇ ಒಂದು ವರ್ಷವಾಯಿತು. Investigation ಮಾಡುವುದಕ್ಕೆ ಬೇರೆ ದೇಶಕ್ಕೆ ಹೋಗಬೇಕೇ? ಅಲ್ಲಿ ಏನೂ ಇಲ್ಲದೆ ಇರುವುದರಿಂದ ನೀವು ಏನು ತನಿಖೆಯನ್ನು ಮಾಡುತ್ತೀರಿ?

ಉಪಾಧ್ಯಕ್ಷರು: ಮಾನ್ಯ ಸಚಿವರೆ, ಇನ್ನು 15 ದಿವಸಗಳಲ್ಲಿ report ಅನ್ನು ತರಿಸಿಕೊಡಿ.

ಶ್ರೀ ವಿನಯ್‌ಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು): ಆದಷ್ಟು ಶೀಘ್ರವಾಗಿ ವರದಿಯನ್ನು ತರಿಸಿಕೊಡುತ್ತೇನೆ.

ಶ್ರೀ ಬಿ.ಆರ್. ಪಾಟೀಲ್: ನೀವು ಏನಾದರೂ ಮಾಡಿದರೆ ಆಗುತ್ತದೆ. ನಾನು ಈ ವಿಚಾರಕ್ಕೆ ಸಂಬಂಧಪಟ್ಟಂತೆ ಕೋರ್ಟಿಗೆ ಹೋಗಿ ಎಳೆದುತರುತ್ತೇನೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ಈ ಬಗ್ಗೆ ನಾನು ಎಷ್ಟು ಸಾರಿ ಉತ್ತರವನ್ನು ಕೊಡುವುದಕ್ಕಾಗುತ್ತದೆ?

ಶ್ರೀ ಬಿ.ಆರ್. ಪಾಟೀಲ್: ಇಲ್ಲಿ ನನಗೆ ಹೇಳುವ ಹಕ್ಕಿಲ್ಲವೇ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ಮಾನ್ಯ ಸಚಿವರು 15 ದಿವಸದಲ್ಲಿ ಉತ್ತರವನ್ನು ತರಿಸಿಕೊಡುತ್ತೇನೆಂದು ಹೇಳಿದ್ದಾರಲ್ಲಾ. ಅವರು ಹೇಳಿರುವುದನ್ನೇ ಪುನಃ ಪುನಃ ಏತಕ್ಕಾಗಿ ಹೇಳುತ್ತಿದ್ದೀರಿ.

ಉಪಾಧ್ಯಕ್ಷರು: ಮಾನ್ಯ ಪಾಟೀಲ್‌ರವರು ಈಗಾಗಲೇ ಒಂದು ವರ್ಷವಾಯಿತು ಏನೂ ಕೆಲಸ ಆಗಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: 15 ದಿವಸದಲ್ಲಿ ಅದನ್ನು ಬಗೆಹರಿಸುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಉಪಾಧ್ಯಕ್ಷರು: ಇನ್ನು 15 ದಿವಸದಲ್ಲಿ ಆ ಕೆಲಸವನ್ನು ಪೂರ್ತಿ ಮಾಡಿ. ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿ ಮತ್ತು ಎಸ್. ಚಿಕ್ಕಮಾದುರವರು ಸದನದಲ್ಲಿಲ್ಲ. ಮಾನ್ಯ ಪುಟ್ಟರಂಗಶೆಟ್ಟಿಯವರೆ ತಾವು ಕೇಳಿ.

6. ವಿಷಯ: ಚಾಮರಾಜನಗರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ.

====

ಶ್ರೀ ಸಿ. ಪುಟ್ಟರಂಗಶೆಟ್ಟಿ (ಚಾಮರಾಜನಗರ): ಮಾನ್ಯ ಉಪಾಧ್ಯಕ್ಷರೆ, ಚಾಮರಾಜನಗರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಸಚಿವರು ಇಲ್ಲ ನಾಳೆ ಇದಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡಿಸುತ್ತೇನೆ.

ಶ್ರೀ ಸಿ. ಪುಟ್ಟರಂಗಶೆಟ್ಟಿ: ಆಯಿತು.

ಉಪಾಧ್ಯಕ್ಷರು: ಮಾನ್ಯ ಪಿಳ್ಳಮುನಿಶಾಮಪ್ಪರವರೆ ನಿಮ್ಮ ಪ್ರಶ್ನೆಗೆ ಉತ್ತರವು ಬಂದಿರುವುದಿಲ್ಲ.

ಶ್ರೀ ಪಿಳ್ಳಮುನಿಶಾಮಪ್ಪ: ಮಾನ್ಯ ಉಪಾಧ್ಯಕ್ಷರೆ, ನಿನ್ನೆಯೂ ಸಹ ಉತ್ತರ ಬಂದಿಲ್ಲ. ಆದರೆ ಈ ಬಗ್ಗೆ ನಾನು ಹೇಳಿಬಿಡುತ್ತೇನೆ. ನಾನು ಈ ವಿಚಾರವನ್ನು ಹೇಳಿಬಿಡುತ್ತೇನೆ.